

ಕವಿ ಗೋಪಾಲಕೃಷ್ಣ ಅಡಿಗರ 'ಅಳುವ ಕಡಲೊಳು ನಗೆಯ ಹಾಯಿದೋಣಿ' ಸಾಲನ್ನು ಬಳಸಿಕೊಂಡು, 'ಕನ್ನಡ ಸಿನಿಮಾ 2022'ರ ಸ್ಥಿತಿಗತಿಯನ್ನು ಒಂದೇ ಸಾಲಿನಲ್ಲಿ ಬಣ್ಣಿಸುವುದಾದರೆ, 'ಸಂಕಟದ ಕಡಲೊಳು ಗೆಲುವಿನ ಕಿರುಹಣತೆ' ಎಂದು ಹೇಳಬಹುದೇನೊ.

ಯಾವುದಿದು ಅಳುವ ಕಡಲು? ಆ ಕಡಲಿನ ಹೆಸರು 'ಕನ್ನಡ ಜನಮಾನಸ'. ಪುನೀತ್ ರಾಜ್‌ಕುಮಾರ್ ಅವರ ಅಗಲಿಕೆಯ ನಿರ್ಗಮನ (ಅ. 29) ನಾಡಿನ ಒಕ್ಕೊರಲಿನ ದುಃಖಕ್ಕೆ ಕಾರಣವಾಯಿತು. 2021 ಕೊನೆಗೊಂಡಿದ್ದೇ ಪುನೀತ್‌ರ ಸಾವಿನ ಆಘಾತದೊಂದಿಗೆ. ಅದರ ನೆರಳು 2022ರ ಉದ್ದಕ್ಕೂ ನಾಡನ್ನೇ ಆವರಿಸಿಕೊಂಡಿರುವಾಗ, ಅದರಿಂದ ಚಿತ್ರರಂಗ ದೂರವುಳಿಯುವುದು ಸಾಧ್ಯವೆ?

ಗೆಲುವಿನ ಹಾಯಿದೋಣಿ ರೂಪದಲ್ಲಿ ಕಾಣಿಸಿಕೊಂಡಿದ್ದು, ಕನ್ನಡ ಚಿತ್ರರಂಗದ ಚೇತರಿಕೆ. ಕನ್ನಡ ಸಿನಿಮಾಗಳ ಗೆಲುವು, ಕರ್ನಾಟಕದಲ್ಲಿ ಮಾತ್ರವಲ್ಲ, ದೇಶದ ಸಿನಿಪೇಟೆಯಲ್ಲೂ ಸುದ್ದಿ ಮಾಡಿತು, 'ಚಂದನವನ' ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಿತು. 'ಪ್ಯಾನ್ ಇಂಡಿಯಾ' ಎನ್ನುವ ಪರಿಕಲ್ಪನೆ ಬಲಗೊಳ್ಳಲು ಕನ್ನಡ ಸಿನಿಮಾಗಳೇ ಕಾರಣವಾದವು.

ನೆನಪಿನ ರೂಪದಲ್ಲಿ ಮಾತ್ರವಲ್ಲ; ಸಿನಿಮಾ ಬಿಂಬಗಳ ರೂಪದಲ್ಲೂ ಪುನೀತ್ 2022ನ್ನು ಆವಾಹಿಸಿಕೊಂಡಿದ್ದರು. ನಿಸ್ಸಂದೇಹವಾಗಿ ಅವರು ವರ್ಷದ ನಟ. ಕರ್ನಾಟಕದ ಮಟ್ಟಿಗವರು ವರ್ಷದ ವ್ಯಕ್ತಿಯೂ ಹೌದು.

ಕೊರೊನಾ ಬಾಧೆಯಿಂದಾಗಿ ಬಸವಳಿದಿದ್ದ ಕನ್ನಡ ಚಿತ್ರರಂಗ ಹೊಸ ವರ್ಷವನ್ನು ಅಳುಕಿನಿಂದಲೇ ಶುರು ಮಾಡಿತು. 'ನಮ್ಮ ಭಾರತ', 'ಒಂಬತ್ತನೇ ದಿಕ್ಕು' ಹಾಗೂ 'ಡಿಎನ್‌ಎ' ಜನವರಿ ತಿಂಗಳಲ್ಲಿ ಬಿಡುಗಡೆಯಾದ ಚಿತ್ರಗಳು. ಮೂರರಲ್ಲಿ, ವಿಭಿನ್ನ ಶೀರ್ಷಿಕೆ ಮತ್ತು ಕಥಾವಸ್ತುವಿನಿಂದಾಗಿ ಗಮನಸೆಳೆದದ್ದು 'ಡಿಎನ್‌ಎ'. ದೇವನೂರು ಮಹಾದೇವ ಅವರ 'ಒಡಲಾಳ' ನೀಳ್ಗತೆಯ 'ಸಂಬಂಜ ಅನ್ನೋದು ದೊಡ್ಡದು ಕನಾ' ಎನ್ನುವ ಪ್ರಸಿದ್ಧ ಸಾಲನ್ನು ಸ್ಫೂರ್ತಿಯಾಗಿಸಿಕೊಂಡು ರೂಪುಗೊಂಡ ಈ ಸಿನಿಮಾದ ನಿರ್ದೇಶನ ಪ್ರಕಾಶ್ ರಾಜ್ ಮೇಹು ಅವರದು.

ಅಳುಕಿನಿಂದಲೇ ಕಾರ್ಯಾರಂಭ ಮಾಡಿದ ಕನ್ನಡ ಚಿತ್ರರಂಗ ತಿಂಗಳಿಂದ ತಿಂಗಳಿಗೆ ವರ್ಷದುದ್ದಕ್ಕೂ ಚುರುಕಾಗುತ್ತಲೇ ಸಾಗಿತು. ಸಿನಿಮಾ ಸಂಪರ್ಕಾಧಿಕಾರಿ ಹಾಗೂ ಕನ್ನಡ ಸಿನಿಮಾಗಳ ಸಂಪನ್ಮೂಲ ವ್ಯಕ್ತಿ ವಿಜಯ್‌ಕುಮಾರ್ ಅವರ ಅಂಕಿಅಂಶಗಳ ಪ್ರಕಾರ, 2022ರಲ್ಲಿ ನವೆಂಬರ್ ಕೊನೆಯ ವೇಳೆಗೆ ತೆರೆಕಂಡ ಸಿನಿಮಾಗಳ ಸಂಖ್ಯೆ 174. ಡಿಸೆಂಬರ್‌ನಲ್ಲಿ ತೆರೆಕಾಣಲು ಸಾಲುಗಟ್ಟಿರುವ ಸಿನಿಮಾಗಳನ್ನು ನೋಡಿದರೆ, 2022ರಲ್ಲಿ ತೆರೆಕಂಡ ಸಿನಿಮಾಗಳ ಸಂಖ್ಯೆ 200ರ ಸಮೀಪ ಬರಬಹುದು. ಈ ಸಂಖ್ಯೆಯೇ ಕೊರೊನಾ ನಂತರ ಕನ್ನಡ ಚಿತ್ರರಂಗ ಚೇತರಿಸಿಕೊಂಡು ಕ್ರಿಯಾಶೀಲವಾಗಿರುವುದನ್ನು ಸೂಚಿಸುವಂತಿದೆ.

## ಅನನ್ಯತೆ, ಸ್ವಂತಿಕೆಯ ಅಭಾವ

**ಯಶಸ್ಸಿನ** ಜೊತೆಗೆ ಕಥಾವಸ್ತು ಮತ್ತು 'ವರಾಹ ರೂಪಂ' ಹಾಡಿಗೆ ಸಂಬಂಧಿಸಿದಂತೆ ಚರ್ಚೆಗೂ ವಿವಾದಕ್ಕೂ 'ಕಾಂತಾರ' ಕಾರಣವಾಯಿತು. ಚಿತ್ರಕಥೆಯಲ್ಲಿ ದೈವ ಮತ್ತು ನಂಬಿಕೆಗೆ ಸಂಬಂಧಿಸಿದಂತೆ ವ್ಯಾಪಕ ಚರ್ಚೆ ಸಾಮಾಜಿಕ ಜಾಲತಾಣಗಳಲ್ಲಿ ನಡೆಯಿತು. ರಿಷಬ್‌ರ ಕಾಳಜಿ–ನಿಲುವುಗಳ ಕುರಿತು ಟೀಕೆಟಿಪ್ಪಣಿಗಳೂ ವ್ಯಕ್ತವಾದವು.

ದಟ್ಟ ಪ್ರಾದೇಶಿಕ ಆವರಣವನ್ನು ಒಳಗೊಂಡ ಕಾರಣದಿಂದಾಗಿ ಚಿತ್ರರಸಿಕರ ಮೆಚ್ಚುಗೆಗೆ ಪಾತ್ರವಾದ 'ಕಾಂತಾರ', 'ವರಾಹ ರೂಪಂ' ಹಾಡಿನ ಕಾರಣಕ್ಕೆ ಕೃತಿಚೌರ್ಯದ ಆರೋಪಕ್ಕೆ ಒಳಗಾಯಿತು. ಕೇರಳದ 'ಥೈಕುಡಮ್ ಬ್ರಿಡ್ಜ್' ಹೆಸರಿನ ಬ್ಯಾಂಡ್, 2015ರಲ್ಲಿ ಬಿಡುಗಡೆ ಮಾಡಿದ್ದ 'ನವರಸಂ' ಎಂಬ ಹಾಡನ್ನೇ 'ಕಾಂತಾರ' ಬಳಗ ಯಥಾವತ್ತಾಗಿ ಎತ್ತಿಕೊಂಡಿದೆ ಎನ್ನುವ ಆರೋಪವೀಗ ನ್ಯಾಯಾಲಯದ ಮುಂದಿದೆ.

ಭೂತದ ವೇಷ ಕಟ್ಟುವವರ ಕುಟುಂಬದ ಭಾವನೆಗಳನ್ನು ಕೇಂದ್ರವಾಗಿರಿಸಿಕೊಂಡು 'ನವರಸಂ' ಗೀತೆ ರೂಪುಗೊಂಡಿತ್ತು. ಆ ಹಾಡಿನ ಎಷ್ಟೋ ದೃಶ್ಯಗಳ ಲಯವನ್ನು ಕೂಡ ರಿಷಬ್ ಶೆಟ್ಟಿ ಬಳಸಿಕೊಂಡಿದ್ದಾರೆ ಎನ್ನಲಾಗಿದೆ. ಅಲ್ಲಿನ ಭೂತಾರಾಧನೆ, 'ಕಾಂತಾರ'ದಲ್ಲಿ ಪಂಜುರ್ಲಿಯ ದೈವಾರಾಧನೆ. 'ಕಾಂತಾರ'ದ ಯಶಸ್ಸಿನಲ್ಲಿ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಅವರ ಕೊಡುಗೆಯೂ ಮುಖ್ಯವಾದುದಾಗಿದೆ. ಆದರೆ, 'ವರಾಹ ರೂಪಂ' ಹಾಡಿನ ವಿವಾದ 'ಕಾಂತಾರ'ದ



ಪೆಟ್ರೊಮ್ಯಾಕ್ಸ್‌ನ ಕ್ಲಿಕ್ಕಾಗದ ಜೋಡಿ ಹರಿಪ್ರಿಯಾ, ನೀನಾಸಂ ಸತೀಶ್